**ಮೂಲ ದಾವಾ ನಂಃ 51/2023**

**ಪಿ ಡಬ್ಲುಃ 01**

**ಸಾಕ್ಷಿಯನ್ನು ದಿನಾಂಕಃ 16.08.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ.ಎಫ್.ಪಿ ,1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಯಾವ ಪರಿಹಾರವನ್ನು ಕೇಳಿ, ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ , ಅವರು ರೋಡಿಗೆ ತೊಂದರೆ ಕೊಡುತ್ತಿದ್ದಾರೆ ಮತ್ತು ನಮ್ಮ ಜಾಗೆಗೆ ತೊಂದರೆ ಕೊಡುತ್ತಿದ್ದಾರೆ. ಸಾಕ್ಷಿ ಮುಂದುವರೆದು, ಓಡಾಡುವ ದಾರಿಯಲ್ಲಿ ಕಂಪೌಂಡ್ ಹಾಕುತ್ತೇವೆಂದು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಜಾಗೆಗೆ ತಾಗಿ ದಾರಿಯಿದ್ದು, ಅಲ್ಲಿ ಕಸಾ ಹಾಕುವುದು ಮತ್ತು ಮಣ್ಣ ಹಾಕುವುದು ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಯಾವ ಭಾಗದಲ್ಲಿ ಕಸ ಮತ್ತು ಮಣ್ಣನ್ನು ಹಾಕುತ್ತಿದ್ದಾರೆ ಎಂದು ಹೇಳಬಹುದೇ ಎಂದರೆ, ಪೂರ್ವಕ್ಕೆ ಎಂದು ನುಡಿಯುತ್ತಾರೆ. ದಾವಾಸ್ತಿ ಸರ್ವೆ ನಂಬರ್ 10/2 ಆಗಿರುತ್ತದೆ. ದಾವಾಸ್ತಿಯು ಸರ್ವೆ ನಂಬರ್ 10/2 ಮಾತ್ರ ಆಗಿರುತ್ತದೆ ಎಂದರೆ ಹೌದು. ದಾವಾಸ್ತಿಯನ್ನು ನಮ್ಮ ತಂದೆಯವರು ಸುನೀಲ್ ಪೀಸೆ ಎನ್ನುವವರಿಂದ 1998 ನೇ ಇಸ್ವಿಯಲ್ಲಿ ನಮ್ಮ ತಾಯಿಯವರ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಖರೀದಿ ಪತ್ರದಲ್ಲಿ ಕಾಣಿಸಿದ ಗಡಿಗಳು ನಮಗೆ ಬಂಧನಕಾರಿ ಎಂದರೆ ಸರಿ. ದಾವಾಸ್ತಿಯ ಚುರ್ತಗಡಿಯು ಪೂರ್ವಕ್ಕೆ ಸರ್ವೆ ನಂಬರ್ 8 ಮತ್ತು 9 ತಾಗಿದೆ, ಪಶ್ಚಿಮಕ್ಕೆ ಸಂಗಪ್ಪ ಕೋಳೂರು ಅವರ ಮಗಳ ಜಮೀನು ಇದೆ, ಉತ್ತರಕ್ಕೆ ಸರ್ವೆ ನಂಬರ್ 13 ವಿನೋದ ಕುರುಬರವರಿದ್ದು , ದಕ್ಷೀಣಕ್ಕೆ ಸರ್ವೆ ನಂಬರ್ 9 ಇದೆ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿ ಪೂರ್ವಕ್ಕೆ ಡಿ.ಜಿ.ಬಸ್ತೆ ಇವರ ಸರ್ವೆ ನಂಬರ್ 9 ರ ಗಡಿ ಮಾತ್ರ ಇದೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಪೂರ್ವಕ್ಕೆ ಸರ್ವೆ ನಂಬರ್ 8 ರ ಗಡಿ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಖರೀದಿ ಪತ್ರದಲ್ಲಿ ಆಸ್ತಿಯ ದಕ್ಷೀಣ ದಿಕ್ಕಿಗೆ ಫಾರೆಸ್ಟ ಡಿಪೋದ ಗಡಿ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ವಸ್ತುಸ್ಥಿತಿಯು ಸರ್ವೆ ನಂಬರ್ 9 ರ ಗಡಿ ದಾಟಿದ ನಂತರ ಫಾರೆಸ್ಟ ಡಿಪೋ ಎಂದರೆ ಹೌದು. ಆದ ಕಾರಣ ಸರಿಯಾಗಿ ವಿವರಣೆಯಿಲ್ಲದ ಆಸ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಹಾಕಿದ ಕಾರಣ , ಅಮಲ್ಜಾರಿಗೊಳಿಸುವಂತಹ ಡಿಕ್ರಿಯನ್ನು ಪಾಸ್ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾರಿಯು ಸರ್ವೆ ನಂಬರ್ 9 ರಲ್ಲಿ ಇದೆ ಎಂದರೆ ಹೌದು. ಸದರಿ ದಾರಿಯನ್ನು ದಾವಾಸ್ತಿಯನ್ನಾಗಿ ತೋರಿಸಿದ್ದೀರಾ ಎಂದರೆ ಇಲ್ಲ. ದಾರಿಯ ಚೆಕ್ ಬಂದಿಯನ್ನು ಕಾಣಿಸಿದ್ದೀರಾ ಎಂದರೆ ಇಲ್ಲ , ನಕ್ಷೆಯಲ್ಲಿ ಏನು ಇದೆ ಅದೆ ಇದೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ ದಾರಿಯ ಅಳತೆ 20 ಫೂಟ್ ಅಗಲ ಮತ್ತು 100 ಫೂಟ್ ಉದ್ದ ಆಗಿರುತ್ತದೆ. ದಾರಿಯು ಪೂರ್ವ ಪಶ್ಚಿಮವಾಗಿ 20 ಫೂಟ್ ಅಗಲವಿದ್ದು , ಉತ್ತರ ದಕ್ಷೀಣವಾಗಿ 100 ಫೂಟ್ ಉದ್ದವಿದೆ ಎಂದು ನುಡಿಯುತ್ತಾರೆ. ಸದರಿ ದಾರಿಯನ್ನು ದಾವಾಸ್ತಿಯನ್ನಾಗಿ ಕಾಣಿಸಲು ತೊಂದರೆ ಇರಲಿಲ್ಲ.

ನಮ್ಮ ಕುಟುಂಬದ ಮೂಲ ಊರು ಉಡುಪಿಯಾಗಿರುತ್ತದೆ. ನಾವು ಖಾಯಂ ಆಗಿ ಮುಂಡಗೋಡಿನಲ್ಲಿ ಉಳಿದು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾವು 1997 ರಿಂದ ಮುಂಡಗೋಡಿಗೆ ಬರುವುದು ಹೋಗುವುದು ಮಾಡುತ್ತಿದ್ದೇವೆ. ಮುಂಡಗೋಡಿನಲ್ಲಿ ಮನೆ ಇದೆಯೇ ಎಂದರೆ , ಸಾಕ್ಷಿಯು ಮೊದಲು ಇತ್ತು ಈಗ ಮಾರಾಟ ಮಾಡಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಯನ್ನು 2010 ನೇ ಇಸ್ವಿಯ ನಂತರ ಮಾರಾಟ ಮಾಡಿದ್ದೇವೆ , ನನಗೆ ಇಸ್ವಿ ನಿಖರವಾಗಿ ನೆನಪಿಲ್ಲ. ನಾವು ಹಾಲಿ ಈಗ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವೆ. ದಾವಾಸ್ತಿಯನ್ನು ಖರೀದಿ ಮಾಡಿದಾಗಿನಿಂದಾ ಗೇಣಿಗೆ ಕೊಟ್ಟಿದ್ದು , ಈಗ 2-3 ವರ್ಷಗಳಿಂದ ನಾನು ಸಾಗುವಳಿಯನ್ನು ಮಾಡುತ್ತಿದ್ದೇನೆ. ಈ ಮೊದಲು ಗೇಣಿಗೆ ಕೊಟ್ಟಿದ್ದ ವ್ಯಕ್ತಿಯನ್ನು ಬಿಡಿಸಿ , ಈಗ ಎರಡು ವರ್ಷಗಳ ಹಿಂದೆ ಶುಂಠಿ ಬೆಳೆಯಲು ಇನ್ನೊಬ್ಬರಿಗೆ ಕೊಟ್ಟಿದ್ದೇವೆ ಎಂದರೆ ಹೌದು. ಈಗ ಒಂದು ವರ್ಷದಿಂದ ನಾನು ಜಮೀನು ಸಾಗುವಳಿ ಮಾಡಿದ್ದೇನೆ ಎಂದರೆ ಹೌದು.

ಪ್ರತಿವಾದಿಯರು ಜೂನ್ -2023 ನೇ ಸಾಲಿನಲ್ಲಿ ಆತಂಕಪಡಿಸಿರುತ್ತಾರೆ. ಯಾವ ಆತಂಕಪಡಿಸಿರುತ್ತಾರೆ ಎಂದರೆ , ಅದು ನನ್ನ ಜಾಗ ಅಲ್ಲಿ ಕಂಪೌಂಡ್ ಮಾಡಿಸುತ್ತೇವೆ ಎಂದು ಆತಂಕಪಡಿಸಿರುತ್ತಾರೆ. ದಾವಾಸ್ತಿಯ ಸಾಗುವಳಿಗೆ ಮತ್ತು ನಮ್ಮ ಕಬ್ಜೆ ಭೋಗ್ವಟೆಗೆ ಪ್ರತಿವಾದಿಯರು ಯಾವುದೇ ರೀತಿಯ ತೊಂದರೆಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಜಾಗವನ್ನು ಅತಿಕ್ರಮಣ ಮಾಡಲು ಪ್ರಯತ್ನಿಸಿದ್ದಾರಾ ಎಂದರೆ ಇರಬಹುದು. ದಾರಿಯು ಕಾಳಗನಕೊಪ್ಪ ರಸ್ತೆಯಿಂದ ಶುರುವಾಗಿ, ಸರ್ವೇ ನಂಬರ್ 9 ಮತ್ತು 10 ರ ಬದಿಯಲ್ಲಿ ಹಾದು ಹೋಗಿ, ಸರ್ವೇ ನಂಬರ್ 8 ರವರೆಗೂ ಹಾದು ಹೋಗಿದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 9 ರ ಮೂಲಕ ದಾವಾಸ್ತಿಗೆ ಹೋಗಲು ದಾರಿ ಇದೆ ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ನಾನು ಗ್ರಾಮ ನಕಾಶೆಯನ್ನು ಹಾಜರುಪಡಿಸಿದ್ದೇನೆ. ನಿಪಿ.3 ನ್ನು ಸಾಕ್ಷಿಗೆ ತೋರಿಸಿ ದಾರಿ ಕೇಳಲಾಗಿ, ಸಾಕ್ಷಿಯು ನಿಪಿ.10 ರ ಗಡಿಗುಂಟ ದಾರಿ ಇದೆ ಎಂದು ನುಡಿಯುತ್ತಾರೆ. ನಾನು ದಾವೆಯೊಂದಿಗೆ ಹಾತ್ ನಕಾಶೆಯನ್ನೂ ಸಹ ಹಾಜರುಪಿಡಿಸಿರುತ್ತೇನೆ ಎಂದರೆ ಹೌದು. ದಾರಿಯು ಪೂರ್ವಕ್ಕೆ ಒಂದು ಭಾಗ ಮತ್ತು ಪಶ್ಚಿಮಕ್ಕೆ ಒಂದು ಭಾಗವಾಗುತ್ತದೆ ಎಂದರೆ ಸರಿಯಲ್ಲ. ದಾರಿಯು ಸರ್ವೇ ನಂಬರ್ 9 ರ ಮೂಲಕ ಕೇರಿ ಏರಿಯ ಮೇಲೆ ಹಾದು ಹೋಗಿ , ಸರ್ವೇ ನಂಬರ್ 8 ರವರೆಗೆ ಹೋಗುತ್ತದೆ, ಸರ್ವೇ ನಂಬರ್ 8 ರ ಮುಂದೆ ಏನು ಇದೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ವಾದಪತ್ರದಲ್ಲಿ ಮತ್ತು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾರಿಯು ಸರ್ವೇ ನಂಬರ್ 8 ರಿಂದ ಮುಂದೆ ಯಾವ ಸರ್ವೇ ನಂಬರಗೆ ಹೋಗುತ್ತದೆ ಎಂದು ಕಾಣಿಸಿರುತ್ತೀರಾ ಎಂದರೆ ಇಲ್ಲ. ದಾರಿಯು ಅನಾದಿ ಕಾಲದಿಂದಲೂ ಇದೆ. ನಾವು ದಾವಾಸ್ತಿಯನ್ನು 1998 ರಲ್ಲಿ ಖರೀದಿ ಮಾಡಿದ್ದು, ಆದ ಕಾರಣ ಅದರ ಹಿಂದಿನ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ , ನಾವು ಖರೀದಿ ಮಾಡಿದಾಗಿನಿಂದಲೂ ಅಲ್ಲಿಂದಲೇ ಓಡಾಡುತ್ತಿದ್ದು , ಇತರರು ಅಲ್ಲಿಂದಲೇ ಓಡಾಡುತ್ತಾರೆ ಎಂದು ನುಡಿಯುತ್ತಾರೆ. ಖರೀದಿ ಪತ್ರದಲ್ಲಿ ದಾರಿಯನ್ನು ಬರೆದಿರಬಹುದು, ನನಗೆ ಅಷ್ಟು ಅಂದಾಜು ಇರುವುದಿಲ್ಲ. ಹೀಗೆ ದಾರಿ ಇರುವ ಬಗ್ಗೆ ಕ್ರಯಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ , ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ. ನಾವು ದಾವಾಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಆಸ್ತಿಯನ್ನು ಮತ್ತು ದಾರಿಯನ್ನು ಪರಿಶೀಲನೆ ಮಾಡಿರುತ್ತೇವೆ. ದಾವಾಸ್ತಿಯ ದಕ್ಷಿಣ ದಿಕ್ಕಿಗೆ ಖಾಯಂ ತಾರೀಖ ದಾರಿ ಇದಿದ್ದರೆ , ಖರೀದಿ ಪತ್ರದಲ್ಲಿ ಆಸ್ತಿಯ ಚೆಕ್ ಬಂದಿಯಲ್ಲಿ ಅದನ್ನು ತೋರಿಸಿತ್ತಿದ್ದರೂ ಎಂದರೆ , ಫಾರೆಸ್ಟ್ ಲ್ಯಾಂಡಿನಿಂದ ದಾರಿ ಇದ್ದ ಕಾರಣ , ಅದನ್ನು ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಾರಿ ಬಗ್ಗೆ ಖರೀದಿ ಪತ್ರದಲ್ಲಿ ಬರೆಸಲು ನಾವೇನಾದರೂ ಪ್ರಯತ್ನಿಸಿರುತ್ತೇವೆಯೇ ಎಂದರೆ ಇಲ್ಲ. ಒಂದುವೇಳೆ ದಾರಿ ಇದಿದ್ದರೆ , ನಾವು ಹೇಳಿ ಬರೆಸುತ್ತಿದ್ದೇವು , ದಾರಿ ಇಲ್ಲದೇ ಇದಿದ್ದರಿಂದ ನಾವು ಖರೀದಿ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲರೂ ಅಲ್ಲಿಂದಲೇ ಓಡಾಡುತ್ತಿದ್ದರು, ಫಾರೆಸ್ಟ್ ಇಲಾಖೆಯವರು ಈಗ 2-3 ವರ್ಷಗಳ ಹಿಂದೆ ಕಂಪೌಂಡ್ ನ್ನು ಹಾಕಿದ್ದಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**